ಆದಿಯಲ್ಲಿ ನಡೆದ ಈ ಬದಲಾವಣೆಯ ಬಳಿಕ ಚರಾಚರ ಜಗತ್ತಿನಲ್ಲಿ ಸಾವಿರಾರು ಬದಲಾವಣೆಗಳು ಶುರುವಾದವು. ಪುಷ್ಪರಾಜನ ಒಂದೇ ಆಜ್ಞೆ ಇಡೀ ಪ್ರಕೃತಿಯ ಮುಖವನ್ನೇ ಬದಲಿಸಿತು. ಹೂವುಗಳು ಬೇಸಿಗೆಯಲ್ಲಿಯೇ ಅರಳುವುದರಿಂದ ಅವುಗಳ ಬೆನ್ನಟ್ಟಿ ದುಂಬಿಗಳೂ ಬೇಸಿಗೆಯನ್ನೇ ಇಷ್ಟಪಟ್ಟವು. ಹೂವರಳಿದ ಮೇಲೆ ಹಣ್ಣುಗಳಾಗಲೇಬೇಕು ತಾನೆ. ಹಣ್ಣುಗಳ ಕಾರುಬಾರು ಬೇಸಿಗೆಯ ಸುಪರ್ದಿಗೆ ಬಂತು. ಹೀಗೆ ಕೆಲಸಕ್ಕೆ ಅನುಕೂಲವೆಂದು ಎಲ್ಲ ಜೀವಿಗಳು ಬೇಸಿಗೆಯತ್ತ ಮುಖ ಮಾಡಿದವು.

ಎಲ್ಲರೂ ಬೇಸಿಗೆಯ ಕಾರುಬಾರಿಗೆ ಶರಣಾಗಲು ಶುರು ಮಾಡಿದ್ದೇ, ಮಳೆಮಾಯಿಯ ಚಕ್ರಾಧಿಪತ್ಯದ ವಿಜೃಂಭಣೆ ಕಡಿಮೆಯಾಯಿತು. ವರ್ಷಕಾಲದ ಗುಂಗು, ಮಬ್ಬುಕತ್ತಲಿಗಿಂತ ಎಲ್ಲರಿಗೂ ಶಿಶಿರ, ವಸಂತದ ಬಟಾಬಯಲಿನ ಬೆಳಕು ಇಷ್ಟವಾಗಲಾರಂಭಿಸಿತು. ಹೀಗೆಯೆ ಸಾವಿರಾರು ವರ್ಷಗಳು ಕಳೆದ ಬಳಿಕ, ಆರೂ ಋತುಗಳು ಸೇರಿ ವಸಂತ ಕಾಲಕ್ಕೆ 'ಋತುಗಳ ರಾಜ' ಎಂಬುದಾಗಿ ಪಟ್ಟಾಭಿಷೇಕ ಮಾಡಿದರು.

## ಉತ್ತರ:

ಎಷ್ಟು ಕಾಲ ಉರುಳಿತೋ ಲೆಕ್ಕ ಯಾರಿಗ್ಗೊತ್ತು. ಆಕಾಶದಲ್ಲಿ ನಕ್ಷತ್ರಗಳು ಎಷ್ಟಿವೆಯೋ ಅಷ್ಟು ವರ್ಷಗಳು ಉರುಳಿರಬಹುದು. ಮಳೆಮಾಯಿ ಅದೇ ಸೌಂದರ್ಯದಲ್ಲಿ ಕಂಗೊಳಿಸುತ್ತಾಳೆ. ಆದರೆ ಋತು ಚಕ್ರಾಧಿಪತ್ಯವನ್ನು ಆಳುತ್ತಿದ್ದಾಗ ಅವಳಲ್ಲಿ ಇದ್ದ ಹೊಳಪೊಂದು ಮಾಯವಾಗಿದೆ. ಅದಕ್ಕೆ ಬಲವಾದ ಕಾರಣವುಂಟು.

ಅವಳೀಗ ಮೊದಲಿನ ಹಾಗೆ ಭೂಮಿ ಮೇಲೆ ನಿರಾಳವಾಗಿ ಓಡಾಡುವಂತಿಲ್ಲ. ಭೂಮಿಯ ಮೇಲಿನ ಜೀವಿಗಳೆಲ್ಲ ಈಗ ಬೇಸಗೆಯ ಬೆಂಬತ್ತಿ ಓಡುತ್ತಿದ್ದಾರೆ. ಮನುಷ್ಯರೆಲ್ಲ ಸೇರಿ ಹೊಸದೊಂದು ಜ್ಞಾನ ಶಾಖೆಯನ್ನು ಕಂಡುಕೊಂಡಿದ್ದಾರೆ. ಅದಕ್ಕೆ ಎಂಜಿನಿಯರಿಂಗ್ ಎಂದು ಹೆಸರಿಟ್ಟುಬಿಟ್ಟಿದ್ದಾರೆ. ಮನೆಯ ನೆಲ ಸಪಾಟು ಮಾಡಲು, ಗೋಡೆಗಳ ಲಂಬವನ್ನು ಅಳೆಯಲೂ ಜಲಮಟ್ಟವನ್ನೇ ಬಳಸುತ್ತಿದ್ದವರು ಅದನ್ನು ಏಕಾಏಕಿ ಬಿಸುಟರು. ಸೌಧಗಳ ನಿರ್ಮಾಣದ ಮೂಲ ಮಂತ್ರವೆಂಬಂತೆ ಇದ್ದ ಜಲಮಟ್ಟ ಜನರ ಅಂತರಂಗದಲ್ಲಿಯೇ ನೀರಿಗಾಗಿ ಜಾಗವೊಂದನ್ನು ಮೀಸಲಿಟ್ಟಿತ್ತು. ಸಣ್ಣದೊಂದು ಶೀಷೆಯಂತಹ ರಚನೆಯೊಳಗೆ ಚೂರೇ ಅಲ್ಲಾಡುವ ನೀರು ಅದು. ಅಥವಾ ಕಡ್ಡಿಯಂತಹ ಕನ್ನಡಿಯ ರಚನೆಯೊಳಗೆ ಮಿನುಗುವ ನೀರು. ದೇವಸ್ಥಾನದಲ್ಲಿ ಅಂಗೈಗೆ ಹಾಕುವ ತೀರ್ಥದಂತೆ ಈ ನೀರು ಪ್ರತಿ ಜೀವಿಯ ಕಣ್ಣಿನಲ್ಲಿಯೂ ಮನೆ ಮಾಡಿಕೊಂಡಿತ್ತು. ಪ್ರತಿಜೀವಿಯ ಎದೆಯಲ್ಲಿಯೂ ಅಷ್ಟು ನೀರು ಇರಲೇಬೇಕಿತ್ತು. ಅದೇ ಅಲ್ಲವೇ ಎದೆಯ ಅಮೃತ ಕಲಶ. ಮರಗಳ ಕಾಂಡದೊಳಗಿರುವ ಬಿಸಿಯ ನಡುವೆ ಇರುವ ಹನಿಯದು. ಸುಡುವ ಅಗ್ನಿಯ ಕೆನ್ನಾಲಗೆಯ ಮಧ್ಯದಲ್ಲಿರುವ ಹಸಿತೇವ ಅದು. ಆಡಿ ಬರುವ ಕಂದನ ಕೊಳಕು ಗಲ್ಲವನ್ನು ಸೆರಗಿನಲ್ಲಿ ಒರಸುತ್ತ, ಪಟ್ಟನೆ ಕೆನ್ನೆ ತಟ್ಟುವಾಗ ಅಮ್ಮನ ಕಂಗಳಲ್ಲಿ ತುಂಬುವ ತೃಪ್ತಿಯ ಹನಿಯದು. ಭೂಮಿಯಮ್ಮನೇ ಈ ಜಲಮಟ್ಟದ ಬಿಂದುವಿನಲ್ಲಿ ಕುಳಿತಿದ್ದಾಳೇನೋ ಎಂಬಂತೆ ಭಾಸವಾಗುತ್ತಿತ್ತು.

ಆದರೆ ಎಲ್ಲವೂ ಹಾಗೆಯೇ ಉಳಿಯುತ್ತದೆಯೇ. ಎಂಜಿನಿಯರ್ ಯಂತ್ರಗಳ ಉಸಾಬರಿಯಲ್ಲಿ ಜಲಮಟ್ಟ ಫಳ್ಳನೇ ಒಡೆದು ಹೋದುದು ಯಾವಾಗ?... ಮಾನವೆದೆಯ ಅಮೃತ ಕಲಶದಲ್ಲಿ ನೀರಿನ ಹನಿಗಳು ಆರಿ ಹೋದವೇ.. ಕಣ್ಣ ಪಾಪೆಯನ್ನು ಪೊರೆಯುವ ಜೀವ ಜಲ ಬಾಷ್ಪವಾಯಿತೆ...